**ದಿ : 06-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ **ಸವಾಲು : 2ನೇ ಎದುರುದಾರರ ಪರ ವಕೀಲರಾದ ಶ್ರೀ ಕೆ.ಜಿ.ಬಿ ರವರಿಂದ**

ನಾನು ಹೆಮ್ಮಾಡಿಯಿಂದ ವಂಡ್ಸೆ ಕಡೆಗೆ ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಮತ್ತೊಂದು ಆಟೋರಿಕ್ಷಾ ಎದುರಿನಿಂದ ಬರುತ್ತಿತ್ತು ಎಂದರೆ ಸರಿ. ಅಪಘಾತವು ಎರಡು ಆಟೋ ರಿಕ್ಷಾಗಳ ನಡುವೆ ಮುಖಾಮುಖಿ ಸಂಭವಿಸಿದೆ ಎಂದರೆ ಸರಿ. ಅಪಘಾತವು ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿಯಲ್ಲ. ಅಪಘಾತ ನಾನು ಪ್ರಯಾಣಿಸುತ್ತಿದ್ದ ರಿಕ್ಷಾ ಚಾಲಕನ ತಪ್ಪಿನಿಂದ ಸಂಭವಿಸಿದೆ ಎಂದರೆ ಸರಿಯಲ್ಲ.

ಅಪಘಾತದಿಂದ ನನ್ನ ಎಡಗೈ ಮೂಳೆ, ಬೆನ್ನು ಮೂಳೆ, Collar ಮೂಳೆ ಮತ್ತು ಸೊಂಟದ ಮೂಳೆ ಮುರಿದಿದ್ದವು ಹಾಗೂ ದೇಹದ ಇತರೆಡೆ ಗಾಯಗಳಾಗಿದ್ದವು. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಎರಡು ಮತ್ತು ಮೂರನೇ ಬಾರಿ ಒಳರೋಗಿಯಾಗಿ ದಾಖಲಾಗಿ ಫಿಯೋಸಿಥೆರಫಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಕೈಗೆ ಮತ್ತು ಬೆನ್ನಿಗೆ ಹಾಕಿರುವ ಒಳಸಾಧನಗಳು ಈಗಲೂ ದೇಹದಲ್ಲಿ ಇರುತ್ತವೆ. ಅವುಗಳನ್ನು ತೆಗೆಸಲು ರೂ.1,00,000/- ಖರ್ಚಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ತಿಂಗಳ ಹಿಂದೆ ಚಿಕಿತ್ಸೆಗೆ ಕೊನೆಯ ಬಾರಿ ಹೋಗಿದ್ದೆ.

ಅಪಘಾತಕ್ಕೂ ಮೊದಲು ನಾನು ಶ್ರೀದೇವಿ ಕ್ಯಾಟರಿಂಗ್ ನಡೆಸುತ್ತಿದ್ದ ಬಗ್ಗೆ ಯಾವುದೇ ಪರವಾನಗಿ ಪಡೆದಿರುವುದಿಲ್ಲ. ಭದ್ರಾ ಎಂಟರ್ ಪ್ರೈಸ್ಸಸ್ ನಡೆಸಲು ಪರವಾನಗಿ ಪಡೆದಿದ್ದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಕ್ಯಾಟರಿಂಗ್ ಮತ್ತು ಭದ್ರಾ ಎಂಟರ್ ಪ್ರೈಸ್ಸಸ್ ನಡೆಸಲು GST ಮಾಡಿಸಿರಲಿಲ್ಲ. ಕಳೆದ 25 ವರ್ಷಗಳಿಂದ ನಾನು ಜೀವಾ ವಿಮಾ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೆ. ನಾನು ಈಗ ಜೀವಾ ವಿಮಾ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿರುವುದಿಲ್ಲ. ನನ್ನ ಜೀವಾ ವಿಮಾ ಪ್ರತಿನಿಧಿ ರದ್ದಾಗಿರುವುದಿಲ್ಲ. ಅಪಘಾತಕ್ಕಿಂತ ಮೊದಲು ಮಾಡಿಸಿರುವ ಪಾಲಿಸಿಗಳಿಗೆ ಸಂಬಂಧಿಸಿದ ಪಾಲಿಸಿಗಳ ಕಮಿಷನ್ ಈಗ ಬರುತ್ತಿಲ್ಲ ಕಾರಣ ಸುಮಾರು 7-8 ವರ್ಷಗಳ ಹಿಂದೆ ನಾನು ಪಾಲಿಸಿಗಳನ್ನು ಮಾಡಿಸುವುದನ್ನು ಬಿಟ್ಟಿರುತ್ತೇನೆ.

ನಮ್ಮ ಕುಟುಂಬಕ್ಕೆ 96 ಸೆಂಟ್ಸ್ ಕೃಷಿ ಆಸ್ತಿ ಇರುತ್ತದೆ. ಸದರಿ ಆಸ್ತಿಯಲ್ಲಿ ನಮ್ಮ ಕುಟುಂಬದವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಆದಾಯ ತೆರಿಗೆ ವಿವರ ಪಟ್ಟಿಯನ್ನು

ತಯಾರಿಸುವ ಸಂದರ್ಭದಲ್ಲಿ ಲೆಕ್ಕಪರಿಶೋಧಕರಿಗೆ ಆದಾಯ ಮತ್ತು ಖರ್ಚಿನ ಬಗ್ಗೆ ವಿವರ ನೀಡಿರುತ್ತೇನೆ. ಆದಾಯ ಮತ್ತು ಖರ್ಚಿನ ಬಗ್ಗೆ ನೀಡಿದ ವಿವರಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಲೆಕ್ಕಾಧಿಕಾರಿಗೆ ನೀಡಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ಭದ್ರಾ ಎಂಟರ್ ಪ್ರೈಸ್ಸಸ್ ಈಗ ನಡೆಯುತ್ತಿರುವುದಿಲ್ಲ. ಕ್ಯಾಟರಿಂಗ್ ಮತ್ತು ಭದ್ರಾ ಎಂಟರ್ ಪ್ರೈಸ್ಸಸ್ ಈಗಲೂ ನಡೆಯುತ್ತಿದೆ ಎಂದರೆ ಸರಿಯಲ್ಲ. ನಿ.ಪಿ-119 ರಿಂದ 121ರಲ್ಲಿ ತೋರಿಸಿರುವ ಆದಾಯ ಕಲ್ಪಿನಿಕವಾಗಿ ತೋರಿಸಿದ ಆದಾಯ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಕ್ಯಾಟರಿಂಗ್ ಮತ್ತು ಭದ್ರಾ ಎಂಟರ್ ಪ್ರೈಸ್ಸಸ್ ನಡೆಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿ.ಪಿ-117ರ ಬಿಲ್ಲು ಡ್ಯುಪ್ಲಿಕೇಟ್ ಬಿಲ್ಲು ಎಂದರೆ ಸರಿ. ಅದರ ಹಣವನ್ನು ನಾನು ಈಗಗಾಲೇ ವಿಮೆಯಡಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ಆದ ಗಾಯಗಳಿಂದ ನನಗೆ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ನಾನು ಯಾವ ರೀತಿ ಆರೋಗ್ಯವಾಗಿದ್ದೆನೋ ಅದೇ ರೀತಿ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿದಷ್ಟು ಹಣ ಪ್ರಯಾಣಕ್ಕಾಗಿ, ಊಟೋಪಚಾರಕ್ಕಾಗಿ, ಸಹಾಯಕರಿಗೆ ಹಾಗೂ ಇನ್ನಿತರ ಸಾಂದರ್ಭಿಕ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು : 1ನೇ ಎದುರುದಾರರ ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ 1ನೇ ಎದುರುದಾರರ ಪರವಾಗಿ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**